ಒಂದಾರು ತಿಂಗಳ ಹಿಂದೆ. ಆ ವೇಳೆಗಾಗಲೇ ರಮೇಶ ಕಾನ್ನಗಾಡಿನ ಹತ್ತಿರದ ಒಂದು ಪಂಚಾಯ್ತದಲ್ಲಿ ಅಸಿಸ್ಟೆಂಟ್ ಸೆಕ್ರೆಟರಿ ಆಗಿದ್ದ. ದೇಯಿ ಹಾಸಿಗೆ ಹಿಡಿದವಳು ಮಗನ ಕನವರಿಕೆಯಲ್ಲೇ ಕಣ್ಣು ಮುಚ್ಚಿದ್ದಳು. ಅಮ್ಮ ಸತ್ತಾಗ ಅಣ್ಣನನ್ನು ಮಣ್ಣಿಗೆ ಕಾಯದ ಅಕ್ಕು ರಮೇಶನನ್ನು ಮುಂದಿಟ್ಟುಕೊಂಡು ತಾನೇ ಎಲ್ಲ ಕಾರ್ಯ ನಡೆಸಿದ್ದಳು. ಹೆಣಕ್ಕೆ ಬೆಂಕಿಯಿಡುವ ವೇಳೆಗೆ ಶೀನ ಹೇಗೋ ವಿಷಯ ತಿಳಿದು ಸ್ಮಶಾನಕ್ಕೆ ಬಂದಿದ್ದರೂ ಬೆಂಕಿ ಕೊಟ್ಟದ್ದು ರಮೇಶನೆ! ಎಗರಿ ಬೀಳುತ್ತಿದ್ದ ಶೀನನನ್ನು ಸಮಾಧಾನ ಮಾಡಿ ಬೊಜ್ಜಕ್ಕೆ ಸೇರುವಂತೆ ಮಾಡಿದ್ದೂ ಗೋಪಾಲಣ್ಣ. ಅವ ಬೊಜ್ಜಕ್ಕೆ ಬಂದರೂ ಕಾಗೆಗೆ ಅನ್ನ ಬಡಿಸುವ ವರೆಗೆ ನಿಂತವ ಊಟಕ್ಕೂ ಕಾಯದೆ ಎದ್ದು ನಡೆದಿದ್ದ. ರಾತ್ರಿ ಸತ್ತವರನ್ನು ಒಳಗೆ ಕರೆಯುವ ಕಾರ್ಯಕ್ಕೂ ಅಕ್ಕುವೇ ಮುಂದೆ ನಿಂತಿದ್ದಳು. ಅದರ ನಂತರ ಒಂದಾರು ತಿಂಗಳಲ್ಲೇ ಅಕ್ಕು ಮಗನಿಗೆ ಮದುವೆ ಮಾಡಿಸುವ ಯೋಜನೆ ಹಾಕಿದ್ದಳು. ಆದರೆ, ಇದ್ದ ಮನೆ ಸಣ್ಣದು. ಒಂದಿಷ್ಟು ಜಾಗ ಖರೀದಿಸಿ ಹೊಸ ಮನೆ ಕಟ್ಟಿ ಆಮೇಲೆ ಮದುವೆ ಆಗುವುದು ಅಂತ ರಮೇಶನ ಯೋಚನೆ. ಪದವಿನಲ್ಲೇ ಗುತ್ತಿನವರ ಬೈಲಿನ ಒತ್ತಿಗೆ ಅವರದ್ದೇ ಒಂದೈವತ್ತು ಸೆಂಟ್ ಜಾಗ ಇತ್ತು. ಅಂತಕ್ಕನ ಎರಡನೇ ಮಗ ಕಿನ್ಯಣ್ಣನಿಗೆ ಬೊಂಬಾಯಿಯಲ್ಲಿ ಅಂಗಡಿ ಹಾಕಲು ಜಾಗ ಮಾರುತ್ತಾರೆಂಬ ಸುದ್ದಿ ರಮೇಶನ ಕಿವಿಗೆ ಬಿದ್ದಿತ್ತು. ಅವನಿಗೆ ಅದರ ಮೇಲೆ ಮೊದಲೇ ಒಂದು ಕಣ್ಣು ಇತ್ತು. ಅಲ್ಲಿ ಮನೆ ಕಟ್ಟಿದರೆ ಅಂತಕ್ಕನ ಜೊತೆಯೇ ಇದ್ದಂತೆ ಎಂಬ ಖುಷಿಯಲ್ಲೇ ಅಂತಕ್ಕನಲ್ಲಿ ವಿಷಯ ಪ್ರಸ್ತಾಪಿಸಿದ್ದಳು ಅಕ್ಕು. "ಮಾರುತ್ತಿದ್ದರೆ ನಿಂಗೇಯ. ಶೆಟ್ರಲ್ಲಿ ಹೇಳ್ತೇನೆ" ಅಂತ ಅಂತಕ್ಕನೂ ಭರವಸೆ ಕೊಟ್ಟಿದ್ದರು. ರಮೇಶನೂ ಹಣ ಹೊಂದಿಸಿ ಇಟ್ಟಿದ್ದ. ಆದರೆ, ಒಂದೇ ತಿಂಗಳಲ್ಲಿ ಎಡ್ಡಿ ಸೋಜರ ಮಗ ಆ ಸ್ಥಳವನ್ನು ತೆಗೆದುಕೊಂಡದ್ದು ರಮೇಶನಿಗೆ ತಿಳಿದಿತ್ತು. ನಿರಾಶೆಯ ಜೊತೆಗೆ ಸಿಟ್ಟೂ ಸೇರಿದವ ಅಮ್ಮ ಬೇಡ ಬೇಡವೆಂದರೂ ಕೇಳದೆ ಗುತ್ತಿನ ಮನೆಗೆ ಹೋಗಿದ್ದ. ಸಣ್ಣದರಲ್ಲೇ ಆರಂಭವಾದ ಮಾತು ಬೆಳೆ ಬೆಳೆದು ಜಗಳದಲ್ಲಿ ಪರ್ಯವಸಾನವಾಗಿತ್ತು. "ನಿಮಗೆ ಮಾತಿಗಿಂತ ಹಣವೇ ಜಾಸ್ತಿಯಾಯಿತಲ್ಲ. ಹಾಗೆ ಬೇಕೂಂತ ಇದ್ರೆ ಎಷ್ಟೂಂತ ಹೇಳಿದ್ರೆ ನಾನೇ ಬಿಸಾಡ್ತಿದ್ದೆ ಅಲ್ವಾ?... ಎರಡು ಅಪ್ಪನಿಗೆ ಹುಟ್ಟಿದ ಬುದ್ಧಿ ತೋರಿಸಿದಿರಿ" ರಮೇಶನ ನಾಲಗೆ ಸಿಟ್ಟಿನ ಕೈಗೆ ಬುದ್ಧಿಯನ್ನು ಕೊಟ್ಟದ್ದು ಸ್ಪಷ್ಟ! ಶೆಟ್ರಿಗೆ ಅದಕ್ಕಿಂತ ಹೆಚ್ಚಿನ ಸಿಟ್ಟು ಬಂದಿತ್ತು. "ಬಿಸಾಡ್ಲಿಕ್ಕೆ ನಿನ್ನತ್ರ ಬೇಕಷ್ಟು ಉಂಟು ಅಂತ ನಂಗೂ ಗೊತ್ತು. ಕಷ್ಟಪಟ್ಟು ಸಂಪಾದಿದ್ದಲ್ಲ, ಗಿಂಬಳದ ದುಡ್ಡು ಅಲ್ಲವಾ ? ಬಿಸಾಡದೆ ಮತ್ತೇನು?... ಇನ್ನು ಎರಡಪ್ಪನ ವಿಷಯ ನೀನು ಹೇಳ್ಬೇಡ. ಬೆದ್ರದಿಂದ ಬರುವಾಗ ನಿನ್ನಮ್ಮನ ಹೊಟ್ಟೆಯಲ್ಲಿ ನೀನಿದ್ದಿ ಅಂತ ನಿಂಗೆ ಗ್ಯಾರಂಟಿ ಉಂಟಾ? ಹೋಗಿ ಕೇಳು ಅಕ್ಕುವಿನಲ್ಲಿ." "ದೇವರೇ... ಇನ್ನೊಂದು ಮಾತನಾಡಿದರೆ ನನ್ನಾಣೆ... ನಿಲ್ಲಿ ಒಮ್ಮೆ" ಅಂತಕ್ಕ ಗೋಪಾಲಣ್ಣನನ್ನು ದೂಡಿಕೊಂಡೆ ಒಳ ಕೋಣೆಗೆ ಒಯ್ದಿದ್ದರು.

ಒಂದೇ ರಾತ್ರಿಯಲ್ಲಿ ಹಾಲಿನಂತಿದ್ದ ಸಂಬಂಧ ಹಾಲಾಹಲವಾಗಿತ್ತು. ರಮೇಶ ಬಂದವನೇ, "ಇನ್ನು ನೀನು ಗುತ್ತಿನ ಮೆಟ್ಟು ಹತ್ತಿದೀ ಎಂದಾದರೆ ನಾನು ಸತ್ತ ಆಣೆ" ಎಂದಿದ್ದ. ಅಂತಕ್ಕ ಮಾಂಕುವಿನಲ್ಲಿ ಹೇಳಿ ಕಳುಹಿಸಿದ್ದರು. ಮಗನ ಆಣೆ ಅಕ್ಕುವಿನ ಕಾಲನ್ನು ಕಟ್ಟಿ ಹಾಕಿತ್ತು. "ರಮೇಶ ಒಳ್ಳೆ ದುಡ್ಡು ಮಾಡಿದ್ದಾನೆ ಅಂತ ಅವರಿವರು ಹೇಳ್ತಾರೆ" ಎಂದು ಮಾಂಕುವಿನ ಬಾಯಿಂದ ಅವಳು ಆಗಾಗ ಕೇಳುತ್ತಿದ್ದಳು. ಗುತ್ತಿನ ಜಾಗೆಗೆ ಬೆಲೆ ಹೇಳಬೇಕಾದರೆ ಮಗನಲ್ಲಿ ಒಂದಿಷ್ಟು ದೊಡ್ಡ ಗಂಟೇ ಇರಬೇಕು ಅನ್ನುವುದನ್ನು ಅವಳೂ ಊಹಿಸಿದ್ದಳು. ಆದುದರಿಂದಲೇ ಮಗನ ವಿಷಯದಲ್ಲಿ ಗೋಪಾಲಣ್ಣನ ಮಾತು ತಪ್ಪು ಎನ್ನುವುದಕ್ಕೆ ಅವಳು ಸಿದ್ಧವಿರಲಿಲ್ಲ. ಆದರೆ, ತನ್ನ ಚಾರಿತ್ರ್ಯದ ಬಗ್ಗೆ ಗೋಪಾಲಣ್ಣನ ಬಾಯಿಂದ ಬಿದ್ದದ್ದು ಸರಿ ಅಂತ ಒಪ್ಪಿಕೊಳ್ಳಲು ಅಕ್ಕುವಿನ ಮನಃಸ್ಸಾಕ್ಷಿ ತಯಾರಾಗಲಿಲ್ಲ... ಗೋಪಾಲಣ್ಣನ ಹದ್ದಿನ ಕಣ್ಣಿನಿಂದ ತನ್ನನ್ನು ಕಾಪಾಡಿದ್ದು ಅಂತಕ್ಕನ ಸರ್ಪಗಾವಲು ಮಾತ್ರವಲ್ಲ. ತನ್ನ ಮಡಿಲ ಗಂಟು ಅಷ್ಟು ಬಿಗಿ ಇದ್ದದ್ದೂ ಅದಕ್ಕೆ ಕಾರಣ ಎಂಬ ಅರಿವು ಗೋಪಾಲಣ್ಣನಿಗೂ ಇತ್ತು